<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 15939-2023

ಸಿಡಬ್ಲೂ - 7ಪಿಡಬ್ಲೂ-10

| | |
|---|---|
| ಸಾಕ್ಷಿದಾರರ ಹೆಸರು | : ಕುಂಟಪ್ಪಗೌಡ ಬಿರಾದಾರ |
| ತಂದೆಯ ಹೆಸರು | : ರುದ್ರಗೌಡ |
| ವಯಸ್ಸು | : 39 ವರ್ಷ |
| ಕೆಲಸ | : ಖಾಸಗಿ ಕೆಲಸ |
| ವಾಸ | : ಹೆಬ್ಬಾಳ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 13-07-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಸೇರಿದ 5613 ಟಾಟಾ ಎಸಿ ವಾಹನ ಸೇರಿದಂತೆ ಹಲವಾರು ವಾಹನಗಳು ನನ್ನ ಬಳಿ ಇರುತ್ತವೆ. ಸದರಿ ವಾಹನಗಳನ್ನು ನಾನು ಪ್ರಚಾರಕ್ಕಾಗಿ ಬಾಡಿಗೆಗೆ ನೀಡುತ್ತೇನೆ. 2023 ರ ವಿಧಾನಸಭಾ ಚುನಾವಣಾ ಸಮಯದಲ್ಲಿ ಬಿಜೆಪಿ ಪಕ್ಷದ ಚುನಾವಣಾ ಪ್ರಚಾರಕ್ಕಾಗಿ ನನಗೆ ಪರಿಚಯಸ್ಥರಾದ ಸಂಗನಗೌಡ ಎಂಬುವವರಿಗೆ ಸೇರಿದ ಕೆಎ-04-ಎಬಿ-4441 ವಾಹವನನ್ನು ನಾನು ನೋಡಿಕೊಳ್ಳುತ್ತಿದ್ದು ಸದರಿ ವಾಹನವನ್ನು ಆರೋಪಿಯು ಚಾಲನೆ ಮಾಡುತ್ತಿದ್ದರು.

ಆ ಸಮಯದಲ್ಲಿ ಆರೋಪಿಯು ಉಪಯೋಗಿಸುತ್ತಿದ್ದ ವಾಹನವನ್ನು ಚುನಾವನಾ ಸಿಬ್ಬಂದಿಯವರು ಹಿಡಿದುಕೊಂಡಿರುವುದಾಗಿ ಮಾಹಿತಿ ಬಂದ ಮೇರೆಗೆ ಆರೋಪಿಯು ಮತ್ತು ಶೇಷಾದ್ರಿಪುರಂ ಪೊಲೀಸರು ನನಗೆ ತಿಳಿರುತ್ತಾರೆ. ನಂತರ ನಾನು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಪೊಲೀಸ್ ಠಾಣೆಗೆ ಹೋಗಿ ನೋಡಲಾಗಿ ಪೊಲೀಸರು ವಶಕ್ಕೆ ಪಡೆದ ವಾಹನದಲ್ಲಿ ನಮೂದಿಸಲಾಗಿದ್ದ ಸಂಖ್ಯೆ 4441 ಎಂಬುದಾಗಿದ್ದು, ಚುನಾವಚಾ ಪ್ರಚಾರಕ್ಕೆ ಪಡೆಯಲಾಗಿದ್ದ ಅನುಮತಿಯನ್ನು ಹಾಜರುಪಡಿಸುವಂತೆ ಪೊಲೀಸರು ತಿಳಿಸಿದ ಮೇರೆಗೆ ನಾನು ಅನುಮತಿ ಪಡೆಯಲಾಗಿದ್ದ 2 ವಾಹನಗಳ ಸಂಖ್ಯೆ 5613, 4441 ರ ಅನುಮತಿಯನ್ನು ಪತ್ರವನ್ನು ಹಾಜರುಪಡಿಸಿ, 4441 ವಾಹನವನ್ನು ನನ್ನ ಸ್ವಾದೀನಕ್ಕೆ ಪಡೆದುಕೊಂಡಿರುತ್ತೇನೆ.

ಅನುಮತಿ ಪಡೆಯಲಾಗಿದ್ದ ವಾಹನದ ಅನುಮತಿ ಪತ್ರಗಳ ಬದಲಾವಣೆ ಆಗಿದ್ದ ಕಾರಣ ಪ್ರಕರಣ ದಾಖಲಾಗಿರುವುದಾಗಿ ತಿಳಿದುಕೊಂಡಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೊಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ಕೆಎ-01-ಎಬಿ-0683 ವಾಹನಕ್ಕೆ ಚುನಾವಣಾ ಪ್ರಚಾರಕ್ಕೆ ಅನುಮತಿ ಪಡೆಯದೇ ಇದ್ದರೂ ಅನುಮತಿ ಪಡೆಯಲಾಗಿದ್ದ 4441 ವಾಹನದ ಅನುಮತಿಯನ್ನು ಬಳಸಿಕೊಂಡು ನಂಬರ್ ಪ್ಲೇಟ್ ನ್ನು ಬದಲಾವಣೆ 6831 ವಾಹನವನ್ನು ಬಳುತ್ತಿದ್ದ ಬಗ್ಗೆ ಪ್ರಕರಣ ದಾಖಲಾಗಿದ್ದು ಈ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ. 6 ಎಂದು  ಗುರುತಿಸಲಾಯಿತು. ನಿಪಿ. 6 ರ ಎಲ್ಲಾ ಸಂಗತಿ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಸಾಕಷ್ಟು ವಾಹನಗಳು ತಮ್ಮ ಬಳಿ ಇರುವುದರಿಂದ ಗಾಡಿಯ ಜೆರಾಕ್ಸ ದಾಖಲೆಗಳು ನೀರು ಬಿದ್ದು ಸರಿಯಾಗಿ ಕಾಣಿಸುವುದಿಲ್ಲ ಎಂದರೆ ಸರಿ. ಆರೋಪಿ ಘಟನೆಯ ಸಮಯದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಆರೋಪಿಯು ಸಹ ನಮ್ಮಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

Witness have not supported the prosecution case though Accused counsel making cross examination it is not permissible hence prohibited form cross examination.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ